# ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975

(ಕರ್ನಾಟಕ ರಾಜ್ಯಪತ್ರ, ಗುರುವಾರ ಮೇ 22, 2003 ಭಾಗ-4ಎ ಪುಟ 496 ರಿಂದ 498ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಧಿನಿಯಮದ ಅನ್ವಯ
4. ಉದ್ಯಾನವನಗಳ ಸಂರಕ್ಷಣೆ

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

I

**1975ರ ಅಧಿನಿಯಮ 23.-** ಕರ್ನಾಟಕ ರಾಜ್ಯದಲ್ಲಿರುವ, ಸರ್ಕಾರದ ಕೆಲವು ಉದ್ಯಾನ ವನಗಳನ್ನು ತೋಟಗಾರಿಕೆಯ ತೋಟಗಳನ್ನಾಗಿ ಸಂರಕ್ಷಿಸುವ ಮತ್ತು ನಿರ್ವಹಣೆ ಮಾಡುವ ಹಾಗೂ ಅಂಥ ಉದ್ಯಾನ ವನಗಳಂತೆ ಅವುಗಳ ಉಪಯುಕ್ತತೆಯನ್ನು ಸುಧಾರಣೆ ಮಾಡುವ ದೃಷ್ಟಿಯಿಂದ ಅಂಥ ಉದ್ಯಾನ ವನಗಳ ಭೂಮಿಯ ಅಥವಾ ಕಟ್ಟಡದ ಯಾವುದೇ ಭಾಗದ ಪರಭಾರೆಯನ್ನು ನಿಷೇಧಿಸಲು ಪ್ರಸ್ತಾವಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ಸಂಖ್ಯೆ. 473, ದಿನಾಂಕ 17-5-1973, ಪುಟ 4ರಲ್ಲಿ ಪ್ರಕಟಿಸಲಾಗಿದೆ).

**II**

**1976ರ ತಿದ್ದುಪಡಿ ಮಾಡುವ ಅಧಿನಿಯಮ 24.-** ಕರ್ನಾಟಕ ಸರ್ಕಾರಿ ಉದ್ಯಾನ ವನಗಳ (ಸಂರಕ್ಷಣೆ) ಅಧಿನಿಯಮ, 1975ರ 4ನೇ ಪ್ರಕರಣಕ್ಕೆ ಅನುಸಾರವಾಗಿ, ಉದ್ಯಾನ ವನಗಳೊಳಗೆ, ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡತಕ್ಕದ್ದಲ್ಲ. ಲಾಲ್‌ಬಾಗ್‌ನಲ್ಲಿ "ವೀರಸೌಧದ" ಮುಖ್ಯ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವುದನ್ನು ಸಾಧ್ಯಗೊಳಿಸಲು ಈ ಷರತ್ತುಗಳನ್ನು ಸಡಿಲಗೊಳಿಸುವುದು ಅಗತ್ಯವೆಂದು ಸರ್ಕಾರವು ಪರಿಗಣಿಸಿದೆ. ಈ ಪ್ರಸ್ತಾವನೆಯಿಂದ ಕರ್ನಾಟಕ ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಉಂಟಾಗುವುದಿಲ್ಲ. ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇದ್ದಿಲ್ಲವಾದ್ದರಿಂದ ಕರ್ನಾಟಕದ ರಾಜ್ಯಪಾಲರು 1955ರ ಜನವರಿ 9 ರಂದು ಆ ಬಗ್ಗೆ ಅಧ್ಯಾದೇಶವನ್ನು ಹೊರಡಿಸಿದ್ದಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ಸಂಖ್ಯೆ 627, ದಿನಾಂಕ 31-1-1976 ಪುಟ 3ರಲ್ಲಿ ಪ್ರಕಟಿಸಲಾಗಿದೆ).

## III

**1982ರ ತಿದ್ದುಪಡಿ ಮಾಡುವ ಅಧಿನಿಯಮ 30**.- ಲಾಲ್‌ಬಾಗ್ ಉದ್ಯಾನವನಗಳಲ್ಲಿ, ಸ್ವಾತಂತ್ರ್ಯ ಯೋಧರ ಸ್ಮಾರಕವಾಗಿ "ವೀರಸೌಧ," ನಿರ್ಮಾಣ ಮಾಡಲು ಸಾಧ್ಯವಾಗುವುದಕ್ಕೆ 1976ರಲ್ಲಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ಕ್ಕೆ 5ನೇ ಪ್ರಕರಣವನ್ನು ಸೇರಿಸಲಾಯಿತು. ಈಗ ಸದರಿ ಪ್ರಸ್ತಾವವನ್ನು ವಿರೋಧಿಸಿ ಸಾರ್ವಜನಿಕರಿಂದ ಹಲವಾರು ಮನವಿಗಳು ಬಂದಿರುವುದನ್ನು ಗಮನಿಸಿ ಸದರಿ 5ನೇ ಪ್ರಕರಣವನ್ನು ಬಿಟ್ಟುಬಿಡುವುದಕ್ಕೆ ಮತ್ತು ವೀರಸೌಧವನ್ನು ಬೇರೆ ಯಾವುದಾದರೂ ಸ್ಥಳದಲ್ಲಿ ನಿರ್ಮಿಸುವುದಕ್ಕೆ ಪ್ರಸ್ತಾಪಿಸಲಾಗಿದೆ.

ಆದುದರಿಂದ ಈ ವಿಧೇಯಕ.

(1982ರ ವಿ.ಸ. ವಿಧೇಯಕ ಸಂಖ್ಯೆ 22, ಕಡತ ಸಂಖ್ಯೆ ಲಾ 82 ಎಲ್‌ಜಿಎನ್ 80 ಇದರಿಂದ ಪಡೆಯಲಾಗಿದೆ).

* * * *

# 1975ರ ಕರ್ನಾಟಕ ಅಧಿನಿಯಮ ಸಂಖ್ಯೆ 23

(1975ರ ಮೇ ಇಪ್ಪತ್ತೆರಡರಂದು ಕರ್ನಾಟಕ ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು).

## ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975

(1975ರ ಮೇ ಒಂಭತ್ತರಂದು ರಾಜ್ಯಪಾಲರ ಅನುಮೋದನೆ ದೊರೆತಿದೆ)

(1976ರ ಕರ್ನಾಟಕ ಅಧಿನಿಯಮ 24 ಮತ್ತು 1982ರ ಕರ್ನಾಟಕ ಅಧಿನಿಯಮ 30ರ ಮೂಲಕ ತಿದ್ದುಪಡಿ ಮಾಡಲಾದಂತೆ)

**ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸರ್ಕಾರಿ ಉದ್ಯಾನವನಗಳ ಸಂರಕ್ಷಣೆಯನ್ನು ಖಚಿತ ಪಡಿಸಿಕೊಳ್ಳಲು ಉಪಬಂಧ ಕಲ್ಪಿಸುವ ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿರುವ, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಕೆಲವು ಉದ್ಯಾನವನಗಳನ್ನು ಸಂರಕ್ಷಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಗಿನಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣಾ) ಅಧಿನಿಯಮ, 1975 ಎಂದು ಕರೆಯತಕ್ಕುದು.

(2) ಇದು ಕೂಡಲೇ ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, 'ಉದ್ಯಾನವನ' ದಲ್ಲಿ ತೋಟವೂ ಒಳಗೊಳ್ಳುತ್ತದೆ.

**3. ಅಧಿನಿಯಮದ ಅನ್ವಯ.–** (1) ರಾಜ್ಯ ಸರ್ಕಾರವು, ಕಾಲ ಕಾಲಕ್ಕೆ, ರಾಜ ಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂತೆ, ಈ ಅಧಿನಿಯಮವು ರಾಜ್ಯ ಸರ್ಕಾರಕ್ಕೆ ಸೇರಿದಂತಹ ಉದ್ಯಾನವನಗಳ ಪರಿಮಿತಿಯೊಳಗೆ ಬರುವ ಎಲ್ಲಾ ಭೂಮಿಗಳಿಗೆ ಹಾಗೂ ಕಟ್ಟಡಗಳಿಗೆ ಅನ್ವಯವಾಗತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಸೂಚನೆಯು, ಸಾಧ್ಯವಾದಷ್ಟು ಮಟ್ಟಿಗೆ ಖಚಿತವಾಗಿ ಅಂತಹ ಉದ್ಯಾನವನಗಳು ಇರುವ ಸ್ಥಳ ಹಾಗೂ ಅವುಗಳ ಪರಿಮಿತಿಗಳನ್ನು ನಿರ್ದಿಷ್ಟಪಡಿಸತಕ್ಕುದು.

**4. ಉದ್ಯಾನವನಗಳ ಸಂರಕ್ಷಣೆ.–** (1) ಈ ಅಧಿನಿಯಮವು ಅನ್ವಯವಾಗುವ ಉದ್ಯಾನವನಗಳನ್ನು ತೋಟಗಾರಿಕೆಯ ತೋಟವನ್ನಾಗಿ ಸಂರಕ್ಷಿಸುವುದು ಹಾಗೂ ನಿರ್ವಹಣೆ ಮಾಡುವುದು ಮತ್ತು ಅಂಥ ತೋಟಗಳ, ಅಂಥ ಉದ್ಯಾನವನಗಳ ಉಪಯುಕ್ತತೆಯನ್ನು ಸುಧಾರಣೆ ಮಾಡಲು ಅವಶ್ಯಕವಾಗಬಹುದಾದಂಥ ಕ್ರಮ ತೆಗೆದುಕೊಳ್ಳುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕುದು.

(2) ಈ ಅಧಿನಿಯಮವು ಅನ್ವಯವಾಗುವಂತಹ ಉದ್ಯಾನವನಗಳಲ್ಲಿ ಇರುವ ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಮಾರಾಟದ, ಗುತ್ತಿಗೆಯ, ದಾನದ, ವಿನಿಮಯದ, ಅಡಮಾನದ ಮೂಲಕ ಅಥವಾ ಅನ್ಯಥಾ ಪರಭಾರೆ ಮಾಡತಕ್ಕುದಲ್ಲ ಅಥವಾ ಅಂತಹ ಭೂಮಿಯ ಅಥವಾ ಕಟ್ಟಡದ ಬಳಕೆಗಾಗಿ ಯಾವುದೇ ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕುದಲ್ಲ ಹಾಗೂ ಈ ಪ್ರಕರಣವನ್ನು ಉಲ್ಲಂಘಿಸಿ ಮಂಜೂರು ಮಾಡಲಾದ ಯಾವುದೇ ಪರಭಾರೆ ಅಥವಾ ಲೈಸೆನ್ಸ್ ಅನೂರ್ಜಿತವಾಗತಕ್ಕುದು:

ಪರಂತು, ಗುತ್ತಿಗೆ ನೀಡಲು ಇರುವ ಈ ಉಪ-ಪ್ರಕರಣದ ಮೇರೆಗಿನ ನಿರ್ಬಂಧವು ಈ ಅಧಿನಿಯಮವು ಜಾರಿಗೆ ಬರುವ ದಿನಾಂಕದಂದು ಇದ್ದ ಕಟ್ಟಡಗಳ ಸಂದರ್ಭದಲ್ಲಿ ಅನ್ವಯವಾಗತಕ್ಕುದಲ್ಲ.

[1][5 x x x][1]

1. 1976ರ ಅಧಿನಿಯಮ 24ರ ಮೂಲಕ ಸೇರ್ಪಡೆಯಾಗಿದೆ ಮತ್ತು 1982ರ ಅಧಿನಿಯಮ 30ರ ಮೂಲಕ 9-1-1976ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

* * * *

The above translation of the Karnataka Government Parks (Preservation) Act, 1975 shall be the authoritative text in the Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore
Date

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನ ಸೌಧ, ಬೆಂಗಳೂರು,

ಕ್ರ.ಸಂ.ಎಎಎಚ್ 199 ಎಎಎಚ್ಎಂ 75, ದಿನಾಂಕ: 30ನೇ ಸಪ್ಟೆಂಬರ್ 75.

ಅಧಿಸೂಚನೆ

1975ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣಾ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ 23)ರ ಪ್ರಕರಣದಿಂದ (1)ನೇ ಮತ್ತು (2)ನೇ ಉಪ-ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಪ್ರಕರಣದ ಉದ್ದೇಶಕ್ಕಾಗಿ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಎಂದು ಹೆಸರಾಗಿರುವ ಉದ್ಯಾನವನಗಳ ಪರಿಮಿತಿಯೊಳಗೆ ಇರುವ ಎಲ್ಲ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ನಿರ್ದಿಷ್ಟಪಡಿಸುತ್ತದೆ ಮತ್ತು ಅವುಗಳ ಪರಿಮಿತಿಗಳು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತಿವೆ:-

ಅನುಸೂಚಿ

ಕಬ್ಬನ್ ಪಾರ್ಕ್, ಬೆಂಗಳೂರು - ಇದರ ಸರಹದ್ದುಗಳು

ಉತ್ತರ: ಬೇಲಿ, ಇತ್ಯಾದಿಗಳಿಂದ ಆವೃತವಾದ ವಿಧಾನ ವೀಧಿ ಮತ್ತು ಕೃಷ್ಣರಾಜೇಂದ್ರ ವೃತ್ತದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಕಛೇರಿ, ಕರ್ನಾಟಕ ಸಚಿವಾಲಯದ ಕ್ಲಬ್, ಗೋಪಾಲ ಗೌಡ ವೃತ್ತ, ಉಚ್ಚ ನ್ಯಾಯಾಲಯ ಕಟ್ಟಡಗಳು, ಕರ್ನಾಟಕ ಸರ್ಕಾರದ ವಿಮಾ ಇಲಾಖೆ ಕಟ್ಟಡ, ಪ್ರಧಾನ ಅಂಚೆ ಕಚೇರಿ ಕಾಂಪೌಂಡು.

ದಕ್ಷಿಣ: ಹಡ್ಸನ್ ವೃತ್ತದಿಂದ ಯೂನಿಯನ್ ವೃತ್ತದವರೆಗಿನ ಅಡ್ಡಗೋಡೆ ಮತ್ತು ಗ್ರಿಲ್, ವೆಂಕಟಪ್ಪ ಆರ್ಟ್ ಗ್ಯಾಲರಿ, ಸರ್ಕಾರಿ ವಸ್ತು ಸಂಗ್ರಹಾಲಯ, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ, ಅಂಡರ್‌ಸನ್‌ಸ್ವತ್ತು, ಪೆಟ್ರೋಲ್ ಬಂಕ್, ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆ ಮತ್ತು ವಸತಿ ಗೃಹಗಳು, ಮತ್ಸ್ಯಾಗಾರ, ಪ್ರಾಣಿ ದಯಾ ಸಂಘದ ಕಚೇರಿ ಮತ್ತು ಮಹಾತ್ಮ ಗಾಂಧಿ ಸರ್ಕಲ್, ಇವೆಲ್ಲದರಿಂದ ಆವೃತ್ತವಾದ ಕಸ್ತೂರಿಬಾ ರಸ್ತೆ.

ಪೂರ್ವ: ಯುಸನ್‌ನ ಪ್ರತಿಮೆಯಿಂದ ಮಹಾತ್ಮಗಾಂಧಿ ಸರ್ಕಲ್, ಬೇಲಿಯಿಂದ ಆವೃತವಾದ ಯೂಸನ್‌ನ ರಸ್ತೆಯಿಂದ ಎಡ್ವರ್ಡ್ ಪ್ರತಿಮೆಯವರೆಗಿನ ಪ್ರದೇಶ.

ಪಶ್ಚಿಮ: ಹಡ್ಸನ್ ಸರ್ಕಲ್, ರೈತರ ಸಂಘ ಕಾಂಪೌಂಡ್, ಮ್ಯಾಜಿಸ್ಟ್ರೇಟ್ ಕಾಂಪೌಂಡ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರ ಕಚೇರಿ ಕಾಂಪೌಂಡ್, ಯಂಗ್‌ಮೆನ್ಸ್ ಮೈಸೂರ್ ಕ್ರಿಕೆಟ್ ಅಸೋಸಿಯೇಷನ್, ನೃಪತುಂಗ ರಸ್ತೆಯಲ್ಲಿರುವ,ಭಾರತೀಯ ರಿಸರ್ವ್ ಬ್ಯಾಂಕು, ಯುವ ಜನ ಕೇಂದ್ರ, ನ್ಯೂ ಪಬ್ಲಿಕ್ ಆಫೀಸು, ರೆವಿನ್ಯೂ ಸರ್ವೆ ಆಫೀಸು, ಕಾಂಪೌಂಡ್ ಗೋಡೆ ಮತ್ತು ಬೇಲಿಯಿಂದ ಸುತ್ತುವರೆದ ಸೆಂಟನರಿ ಕ್ಲಬ್.

**ಲಾಲ್‌ಬಾಗಿನ ಸರಹದ್ದುಗಳು**

ಉತ್ತರ: ಜವರಯ್ಯ ಸರ್ಕಲ್, ಕೆಂಗಲ್ ಹನುಮಂತಯ್ಯ ಸರ್ಕಲ್, ಇತ್ಯಾದಿಗಳ ಪಕ್ಕದಲ್ಲಿರುವ ಕಾಂಪೌಂಡ್ ಗೋಡೆಯಿಂದ ಸುತ್ತುವರಿದ ಹೊಸೂರು ರಸ್ತೆ ಮತ್ತು ಲಾಲ್‌ಬಾಗ್ ಕೋಟೆ ರಸ್ತೆ, ಆಂಜನೇಯಸ್ವಾಮಿ ದೇವಸ್ಥಾನದ ಆಸ್ತಿಗಳು, ಮದ್ರಾಸ್-ಬೆಂಗಳೂರು ಸಾರಿಗೆ ಸ್ವತ್ತುಗಳು, ಇತ್ಯಾದಿ.

ದಕ್ಷಿಣ: ಅಶೋಕ ಪಿಲ್ಲರ್‌ಗೆ ಹೋಗುವ ಅಶೋಕ ಪಿಲ್ಲರ್ ಸರ್ಕಲ್‌ನಿಂದ ರಸ್ತೆ ಕಾಂಪೌಂಡ್ ಗೋಡೆಯಿಂದ ಸುತ್ತುವರಿದ ಹೊಸೂರು ರಸ್ತೆಗೆ ಹೋಗುವ ರಸ್ತೆ, ಸೆಂಟ್ರಲ್ ಫಾರ್ಮಸಿ ಕಟ್ಟಡ, ಸಿದ್ದಾಪುರ ಗೇಟ್, ಇತ್ಯಾದಿ.

ಪೂರ್ವ: ಕಾಂಪೌಂಡ್ ಗೋಡೆಯಿಂದ ಸುತ್ತುವರಿದ ಸಿದ್ದಾಪುರ ಸರ್ಕಲ್‌ನಿಂದ ಹೊಸೂರು ಜಂಕ್ಷನ್‌ವರೆಗಿನ ರಸ್ತೆ ಮತ್ತು ಆಂಜನೇಯಸ್ವಾಮಿ ದೇವಸ್ಥಾನ.

ಪಶ್ಚಿಮ: ಕ್ರಂಬಿಗಲ್ ರಸ್ತೆ, ಪಶ್ಚಿಮ ಮತ್ತು ಕಾಂಪೌಂಡ್ ಗೋಡೆ ಸುತ್ತುವರಿದ ರಸ್ತೆ, ಬಸವನಗುಡಿ ಗೇಟ್, ಅನ್ನಪೂರ್ಣ ಪೆಟ್ರೋಲ್ ಬಂಕ್, ಇತ್ಯಾದಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಸ್. ವೆಂಕಟೇಶ್,**
ಸರ್ಕಾರದ ಕಾರ್ಯದರ್ಶಿ,
ಕೃಷಿ ಮತ್ತು ಪಶುಪಾಲನಾ ಇಲಾಖೆ.

## 1978ರ ಕರ್ನಾಟಕ ಅಧಿನಿಯಮ ಸಂಖ್ಯೆ 24

(1976ರ ಮಾರ್ಚ್ ಹನ್ನೆರಡರಂದು ಕರ್ನಾಟಕ ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು).

## ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 1976

(1976ರ ಮಾರ್ಚ್ ಹನ್ನೆರಡರಂದು ರಾಜ್ಯಪಾಲರ ಅನುಮೋದನೆ ಪಡೆದಿದೆ).

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮವನ್ನು ತಿದ್ದುಪಡಿ ಮಾಡುವ ಅಧಿನಿಯಮ, 1975.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ ಸಂಖ್ಯೆ 23) ನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 1976 ಎಂದು ಕರೆಯತಕ್ಕುದು.

(2) ಇದು 1976ರ ಜನವರಿ ಒಂಭತ್ತನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

2. ಹೊಸ ಪ್ರಕರಣ 5ರ ಸೇರ್ಪಡೆ:- ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ ಸಂಖ್ಯೆ 23) (ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 4ನೇ ಪ್ರಕರಣದ ನಂತರ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"5. ಕೆಲವು ಸಂದರ್ಭಗಳಲ್ಲಿ ಅನುಮತಿ:- 4ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ರಾಜ್ಯ ಸರ್ಕಾರವು, ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಬಳಕೆ ಮತ್ತು ಅಂತಹ ವಿಷಯಗಳ ಕುರಿತಂತೆ

ಸರ್ಕಾರವು ವಿಧಿಸಬಹುದಾದಂತಹ ಷರತ್ತುಗಳು ಹಾಗೂ ನಿರ್ಬಂಧಗಳಿಗೊಳಪಟ್ಟು, ಭಾರತದ ವಿಮೋಚನೆಯ ಹೋರಾಟದಲ್ಲಿ ಹುತಾತ್ಮರಾದವರ ಜ್ಞಾಪಕಾರ್ಥವಾಗಿ 'ವೀರಸೌಧ' ಎನ್ನುವ ಒಂದು ಕಟ್ಟಡವನ್ನು ಬೆಂಗಳೂರು ನಗರದ ಲಾಲ್‌ಬಾಗಿನಲ್ಲಿ ನಿರ್ಮಿಸಲು ಅನುಮತಿ ನೀಡಬಹುದು."

**3. 1976ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2ರ ನಿರಸನ.–** (1) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧ್ಯಾದೇಶ, 1976 (1976ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದಿಂದ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದಿಂದ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

ಎಂ.ಎಲ್. ರಾಮಸ್ವಾಮಿ,
ಪ್ರಾರೂಪಕಾರರು ಮತ್ತು ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ, ಕಾನೂನು
ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

* * * *

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:– ಬೆಂಗಳೂರಿನ ಲಾಲ್‌ಬಾಗ್ ತೋಟದಲ್ಲಿ ವೀರಸೌಧದ ನಿರ್ಮಾಣ–ವೀರಸೌಧಕ್ಕೆ ಆರು ಎಕರೆ ಜಮೀನನ್ನು ಬಿಡುಗಡೆ ಮಾಡುವುದು–ನಿರ್ಮಾಣ ಟ್ರಸ್ಟ್–ಮಂಜೂರಾತಿಯನ್ನು ಹಿಂತೆಗೆದುಕೊಂಡಿರುವ ಬಗ್ಗೆ.

ಆದೇಶ ಸಂಖ್ಯೆ. ಎಎಚ್ 395 ಎಚ್‌ಎಂ 76, ಬೆಂಗಳೂರು,
ದಿನಾಂಕ 6ನೇ ಅಕ್ಟೋಬರ್, 1976.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ ಎಎಚ್ 196 ಎಚ್‌ಎಂ 75, ದಿನಾಂಕ:20–5–1976.
2. ಅದೇ ಸಂಖ್ಯೆಯ ಸರ್ಕಾರಿ ಆದೇಶ ದಿನಾಂಕ:6–7–1976.
3. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬೆಂಗಳೂರು ಇವರಿಗೆ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ, ನವದೆಹಲಿ–ಇವರ ಮಾಹಿತಿ ಸಲಹೆಗಾರರು ಬರೆದ ಪತ್ರ ಸಂ. ಎಫ್7 (5) ಪಿಎಚ್‌ಪಿ, ದಿನಾಂಕ: 28–8–1976.
4. ಪತ್ರ ಸಂ.ಸಿಜಿಎಸ್ 981:76, ದಿನಾಂಕ:10:13ನೇ ಸಪ್ಟೆಂಬರ್, 1976.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿ ಆರು ಎಕರೆ ಅಳತೆಯ ಪ್ರದೇಶದಲ್ಲಿ ಭಾರತದ ವಿಮೋಚನೆಯ

ಹೋರಾಟದಲ್ಲಿ ಹುತಾತ್ಮರಾದವರಿಗೆ ಸ್ಮಾರಕವಾಗಿ ಒಂದು ಕಟ್ಟಡವನ್ನು, ಅದರಲ್ಲಿ ಹೇಳಲಾದ ಕೆಲವು ಷರತ್ತುಗಳಿಗೊಳಪಟ್ಟು ನಿರ್ಮಿಸಲು ವೀರಸೌಧ ನಿರ್ಮಾಣ ಟ್ರಸ್ಟ್, ಬೆಂಗಳೂರು ಇದಕ್ಕೆ ಅನುಮತಿ ನೀಡಲಾಗಿತ್ತು.

ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ, ನವದೆಹಲಿ, ಇವರ ವಾರ್ತಾ ಸಲಹೆಗಾರರು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗಾಗಿ ಸ್ಮಾರಕ ಭವನವನ್ನು ನಿರ್ಮಿಸುವ ಬಗೆಗಿನ ಒಂದು ಪ್ರಸ್ತಾವವನ್ನು ಹಲವಾರು ಜನರು, ಈ ಯೋಜನೆಯಿಂದಾಗಿ ಲಾಲ್‌ಬಾಗ್‌ನ ಮತ್ತಷ್ಟು ಜಾಗ ಅತಿಕ್ರಮಿಸಲಾಗುತ್ತದೆ ಎಂಬ ಭಯದಿಂದ, ಆಕ್ಷೇಪಿಸಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆಂದು ತಿಳಿಸಿದ್ದಾರೆ. ಈ ವಿಷಯವನ್ನು ಮರು ಪರಿಶೀಲಿಸಲಾಗಿದೆ ಹಾಗೂ ಈ ಸ್ಮಾರಕಕ್ಕೆ ಬೇರೆ ಎಲ್ಲಿಯಾದರೂ ಸ್ಥಳವನ್ನು ಕಂಡುಕೊಳ್ಳಲು ತೀರ್ಮಾನಿಸಲಾಗಿದೆ. ಮೇಲೆ ವಿವರಿಸಿದ ಸಂದರ್ಭಗಳಲ್ಲಿ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ವೀರಸೌಧವನ್ನು ನಿರ್ಮಿಸುವ ಕುರಿತು ಈಗಾಗಲೇ ಹೊರಡಿಸಿರುವ ಸರ್ಕಾರದ ಆದೇಶವನ್ನು ರದ್ದುಗೊಳಿಸಬಹುದೆಂದು ತೀರ್ಮಾನಿಸಲಾಯಿತು.

## ಆದೇಶ

ಸರ್ಕಾರಿ ಆದೇಶ ಸಂಖ್ಯೆ:ಎಎಎಚ್ 196 ಎಎಚ್‌ಎಂ 75, ದಿನಾಂಕ:20-5-1976 ಮತ್ತು 6-7-1976ರ ಅದೇ ಸಂಖ್ಯೆಯ ಸರ್ಕಾರಿ ಆದೇಶದಲ್ಲಿ, ಬೆಂಗಳೂರು ಲಾಲ್‌ಬಾಗ್‌ನಲ್ಲಿ ವೀರಸೌಧ ಎಂದು ಕರೆಯಲಾಗುವ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಮಾರಕವನ್ನು ನಿರ್ಮಿಸುವುದಕ್ಕೆ ಅನುಮತಿ ನೀಡಿರುವ ಸರ್ಕಾರಿ ಆದೇಶಗಳನ್ನು ಈ ಮೂಲಕ ಹಿಂತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎನ್. ರಾಮ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಮತ್ತು ಪಶುಪಾಲನಾ ಇಲಾಖೆ.

* * * *

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಕಬ್ಬನ್‌ಪಾರ್ಕ್ ಹಾಗೂ ಲಾಲ್‌ಬಾಗ್‌ನಲ್ಲಿ ಭೂ ಮಂಜೂರಾತಿ-
ಸೂಚನೆಗಳು ಕುರಿತು.

ಆದೇಶ ಸಂಖ್ಯೆ. ಎಎಎಚ್ 264 ಎಎಚ್‌ಎಂ 78, ಬೆಂಗಳೂರು, ದಿನಾಂಕ:14ನೇ ನವೆಂಬರ್, 1979.

**ಪ್ರಸ್ತಾವನೆ:**

ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಪ್ರದೇಶಗಳಲ್ಲಿ ಕಟ್ಟಡಗಳನ್ನು ನಿರ್ಮಿಸುವ ಉದ್ದೇಶಗಳಿಗಾಗಿ ಸ್ಥಳವನ್ನು ಹಂಚಿಕೆ ಮಾಡುವಂತೆ ವಿವಿಧ ಸಂಘ ಹಾಗೂ ಸಂಸ್ಥೆಗಳಿಂದ ಮತ್ತೆ ಮತ್ತೆ ಕೋರಿಕೆಗಳನ್ನು ಸ್ವೀಕರಿಸಲಾಗುತ್ತಿದೆ. ಬಾಲಭವನ ಪ್ರಾಧಿಕಾರಿಗಳೂ ಸಹ ತಾತ್ಕಾಲಿಕ ನಿರ್ಮಿತಿಗಳು, ಇತ್ಯಾದಿಗಳನ್ನು ಕಟ್ಟಲು ಹೆಚ್ಚುವರಿ ಸ್ಥಳದ ಹಂಚಿಕೆಗಾಗಿ ಕೋರಿಕೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ರ ಉಪಬಂಧದ ಅನುಸಾರ, ಈ ಉದ್ಯಾನವನಗಳಲ್ಲಿ ಕಟ್ಟಡ ನಿರ್ಮಾಣ ಉದ್ದೇಶಗಳಿಗಾಗಿ ಯಾವ ಹೆಚ್ಚುವರಿ ಭೂಮಿಯನ್ನು ಹಂಚಿಕೆ ಮಾಡಲಾಗುವುದಿಲ್ಲ. ಆದರೂ, ಈ ವಿಷಯವನ್ನು, ಈ ಪ್ರದೇಶಗಳಲ್ಲಿ ವಿಶಿಷ್ಟ ವಾತಾವರಣವನ್ನು ಸಂರಕ್ಷಿಸುವುದಕ್ಕೆ ಗಮನ ನೀಡಿ ಪರಿಶೀಲಿಸಲಾಯಿತು ಮತ್ತು ಕಬ್ಬನ್‌ಪಾರ್ಕ್ ಹಾಗೂ ಲಾಲ್‌ಬಾಗ್ ಎರಡರಲ್ಲಿಯೂ, ಯಾವುದೇ ಸಂಘಗಳಿಗಾಗಲೀ ಅಥವಾ ವ್ಯಕ್ತಿಗಳಿಗಾಗಲೀ ಯಾವುದೇ ನಿರ್ಮಾಣವನ್ನು ಕೈಗೊಳ್ಳಲು ಅನುಮತಿಸಬಾರದೆಂದು ಸರ್ಕಾರವು ತೀರ್ಮಾನಿಸಿದೆ.

**ಆದೇಶ**

ತದನುಸಾರವಾಗಿ, ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಪ್ರದೇಶಗಳಲ್ಲಿ, ತೋಟಗಾರಿಕೆ ಇಲಾಖೆಯು, ಇಲಾಖೆಯ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ನಿರ್ಮಾಣ ಕಾರ್ಯಗಳ ಹೊರತಾಗಿ, ಯಾವುದೇ ಸಂಘ ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ, ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕುದಲ್ಲ ಅಥವಾ ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯಾಗಲಿ ಮತ್ತೆ ಯಾವುದೇ ನಿರ್ಮಾಣಗಳನ್ನು ಕೈಗೊಳ್ಳಲು ಅನುಮತಿಸತಕ್ಕುದಲ್ಲವೆಂದು ನಿರ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಶೆಟ್ಟಿ ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಮತ್ತು ಪಶುಪಾಲನಾ ಇಲಾಖೆ.

* * * *

**ಕರ್ನಾಟಕ ಸರ್ಕಾರ**

ಕ್ರ.ಸಂ.ಎಎಎಚ್ 381 83.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
3ನೇ ಹಂತ, 4ನೇ ಮಹಡಿ,
ಡಾ॥ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27ನೇ ಸಪ್ಟೆಂಬರ್, 1983.

**ಅಧಿಸೂಚನೆ**

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ 23)ರ 3ನೇ ಪ್ರಕರಣದ (1)ನೇ ಮತ್ತು (2)ನೇ ಉಪ-ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸರ್ಕಾರಿ ಅಧಿಸೂಚನೆ ಸಂಖ್ಯೆ.ಎಎಎಚ್ 199 ಎಎಚ್ಎಂ 75, ದಿನಾಂಕ 30ನೇ ಸಪ್ಟೆಂಬರ್ 1975 ಇದನ್ನು ಭಾಗಶಃ ಮಾರ್ಪಾಟುಗೊಳಿಸಿ, ಸದರಿ ಪ್ರಕರಣದ ಉದ್ದೇಶಕ್ಕಾಗಿ, ಕಬ್ಬನ್ ಪಾರ್ಕ್ ಎಂಬ ಹೆಸರಿನ (ಶ್ರೀ ಚಾಮರಾಜೇಂದ್ರ ಪಾರ್ಕ್ ಎಂದು ಪುನರ್ ನಾಮಕರಣ ಗೊಳಿಸಲಾಗಿದೆ) ಉದ್ಯಾನವನದ ಪರಿಮಿತಿಗಳೊಳಗಿರುವ ಎಲ್ಲ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ಈ ಮೂಲಕ ನಿರ್ದಿಷ್ಟಪಡಿಸುತ್ತದೆ ಮತ್ತು ಅದರ ಸ್ಥಳ ಮತ್ತು ಪರಿಮಿತಿಗಳು ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕುದು:-

**ಅನುಸೂಚಿ**

ಶ್ರೀ ಚಾಮರಾಜೇಂದ್ರ ಪಾರ್ಕ್, ಬೆಂಗಳೂರು (ಹಿಂದೆ ಕಬ್ಬನ್ ಪಾರ್ಕ್ ಎಂದು ಕರೆಯಲಾಗುತ್ತಿದ್ದ) ಇದರ ಸರಹದ್ದುಗಳು.

ಉತ್ತರ: ಬಸವೇಶ್ವರ ವೃತ್ತದಿಂದ ಮಿಲ್ಲರ್ ರಸ್ತೆಯ ಮೂಲಕ ಎಲ್ಆರ್ಡಿಇ ಪ್ರದೇಶವೂ ಸೇರಿಕೊಂಡು, ಅದು ಅಲಿಆಸ್ಕರ್ ರಸ್ತೆಯನ್ನು ಸೇರುವ ಬಿಂದುವಿನವರೆಗೆ, ಅಲ್ಲಿಂದ ಅಲಿಆಸ್ಕರ್ ರಸ್ತೆಯ ಮೂಲಕ ಎಲ್ಆರ್ಡಿಇ ಪ್ರದೇಶವೂ ಸೇರಿಕೊಂಡು ರಸ್ತೆಯು ರಾಜಭವನದ ಗೇಟ್ ರಸ್ತೆಯನ್ನು ಸೇರುವವರೆಗೆ. ಆನಂತರ, ರಾಜಭವನ ಗೇಟ್ವರೆಗಿನ, ಆ ನಂತರ ರಾಜಭವನ ಗೇಟ್ನಿಂದ ಅಂಬೇಡ್ಕರ್ ವೀಧಿಯನ್ನು ಸೇರುವ ಬಿಂದುವಿನವರೆಗೆ, ರಾಜಭವನ ರಸ್ತೆಯುದ್ದಕ್ಕೂ ಇರುವ ರಾಜಭವನದ ಕಾಂಪೌಂಡ್ ಗೋಡೆಯವರೆಗೆ ಅಲ್ಲಿಂದ ಅಂಚೆ ಮಹಾಕಾರ್ಯಾಲಯ ಕಾಂಪೌಂಡ್ ಮತ್ತು ಎಡ್ವರ್ಡ್ ಪ್ರತಿಮೆ ಸರ್ಕಲ್ಗೆ ಕೊನೆಯಾಗುವ ಕೇಂದ್ರ ತಂತಿ ಕಚೇರಿ ಕಾಂಪೌಂಡ್ವರೆಗೆ.

ವಾಯುವ್ಯ: ಕ್ವೀನ್ ಪ್ರತಿಮೆ ವೃತ್ತದ ವರೆಗೆ ಮತ್ತು ಎಡ್ವರ್ಡ್ ಪ್ರತಿಮೆ ವೃತ್ತದಿಂದ ಕ್ವೀನ್ ರಸ್ತೆಯ ಮೂಲಕ ಕ್ವೀನ್ ಪ್ರತಿಮೆ ವೃತ್ತದವರೆಗೆ.

ಆಗ್ನೇಯ: ಕ್ವೀನ್ ಪ್ರತಿಮೆ ವೃತ್ತದಿಂದ ಕಸ್ತೂರಬಾ ರಸ್ತೆಯ ಮೂಲಕ ಎಸ್.ಪಿ.ಸಿ.ಎ. ಕಾರ್ಯಾಲಯ, ಮತ್ಸ್ಯಾಗಾರಗಳನ್ನು ಒಳಗೊಂಡು ಸಿದ್ದಲಿಂಗಯ್ಯ ವೃತ್ತದವರೆಗೆ ಮತ್ತು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ, ಅಂಡರ್ಸನ್ ಸ್ವತ್ತಿನವರೆಗೆ ಅಲ್ಲಿಂದ ವಿ.ಐ.ಟಿ.ಎಂ. ಸರ್ಕಾರಿ

ವಸ್ತುಸಂಗ್ರಹಾಲಯ ಮತ್ತು ವೆಂಕಟಪ್ಪ ಆರ್ಟ್ ಗ್ಯಾಲರಿಯವರೆಗೆ ಮತ್ತು ಅವೂ ಸೇರಿದಂತೆ ಹಾಗೆಯೇ ಸಿದ್ದಲಿಂಗಯ್ಯ ವೃತ್ತದಿಂದ ಕಸ್ತೂರಿಬಾ ರಸ್ತೆ ಮೂಲಕ ಹಡ್ಸನ್ ವೃತ್ತದವರೆಗೆ.

ನೈರುತ್ಯ: ಹಡ್ಸನ್ ವೃತ್ತದಿಂದ ಕೃಷ್ಣರಾಜೇಂದ್ರ ವೃತ್ತದವರೆಗೆ ನೃಪತುಂಗ ರಸ್ತೆಯ ಮೂಲಕ ಮತ್ತು ಅಲ್ಲಿಯವರೆಗೆ.

ವಾಯುವ್ಯ: ಕೃಷ್ಣರಾಜೇಂದ್ರ ವೃತ್ತದಿಂದ ಗೋಪಾಲಗೌಡ ವೃತ್ತದವರೆಗೆ ಡಾ॥ ಅಂಬೇಡ್ಕರ್ ವೀಧಿ ಮೂಲಕ ಮತ್ತು ಅಲ್ಲಿಯವರೆಗೆ.

ಪಶ್ಚಿಮ: ಗೋಪಾಲಗೌಡ ವೃತ್ತದಿಂದ ರೆಸಿಡೆನ್ಸಿಪಾರ್ಕ್ ರಸ್ತೆ ಮೂಲಕ ವಿಧಾನ ಸೌಧ ಮತ್ತು ಶಾಸಕರ ಭವನ ರಸ್ತೆಯನ್ನು ಒಳಗೊಂಡಂತೆ ಬಸವೇಶ್ವರ ವೃತ್ತದವರೆಗೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಎ. ಪದ್ಮಸಾಲಿ,
ಸರ್ಕಾರದ ಉಪ-ಕಾರ್ಯದರ್ಶಿ,
ಕೃಷಿ ಮತ್ತು ಪಶುಪಾಲನಾ ಇಲಾಖೆ,
ತೋಟಗಾರಿಕೆ ಮತ್ತು ಮೀನುಗಾರಿಕೆ.

* * * *

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
3ನೇ ಹಂತ, 4ನೇ ಮಹಡಿ,
ಡಾ॥ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: ಮಾರ್ಚ್, 1985

**ಅಧಿಸೂಚನೆ**

ಕರ್ನಾಟಕ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಅಧ್ಯಾದೇಶ, 1984ರ (1984ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 19) 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಅನುಸಾರವಾಗಿ, ........................ ಜಿಲ್ಲೆಯ ........................ ನಗರ ಸಭೆಯ ಸ್ಥಳೀಯ ಪ್ರಾಧಿಕಾರವು, ಆ ಪುರಸಭಾ ಪ್ರದೇಶದೊಳಗೆ ಬರುವ ಎಲ್ಲ ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಬಯಲು ಸ್ಥಳಗಳ ಪೂರ್ಣಪಟ್ಟಿಯನ್ನು, ನಕ್ಷೆ ಮತ್ತು ಭೂಪಟಗಳ ಸಹಿತ ಅಳತೆಯೊಂದಿಗೆ ಸರ್ಕಾರದ ಅನುಮೋದನೆಗಾಗಿ ಸಿದ್ಧಪಡಿಸಿ ಸಲ್ಲಿಸಿರುವುದರಿಂದ;

ಆಸಕ್ತರಾದ ಯಾರೇ ವ್ಯಕ್ತಿಯು, ಪಟ್ಟಿಯಲ್ಲಿ ಇರುವ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಲಿಖಿತದಲ್ಲಿ ಅವರ ನಿವೇದನೆಗಳನ್ನು, ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಪರಿಶೀಲನೆಗಾಗಿ, ಈ ಅಧಿಸೂಚನೆಯ ದಿನಾಂಕದಿಂದ ಮೂರು ತಿಂಗಳೊಳಗೆ, ಸರ್ಕಾರದ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ ಮಿನಿಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560 001 ಇವರಿಗೆ ಸಲ್ಲಿಸಬಹುದೆಂದು ಈ ಮೂಲಕ (2)ನೇ ಉಪ-ಪ್ರಕರಣದ ಅಥವಾ ಸದರಿ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ನೋಟೀಸು ನೀಡಲಾಗಿದೆ.

ಈ ಮೂಲಕ ಅನುಬಂಧಿಸಲಾದ ಎಲ್ಲ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ನಕ್ಷೆ ಹಾಗೂ ಭೂಪಟಗಳೊಂದಿಗೆ ಮತ್ತು ಅಳತೆಗಳೊಂದಿಗೆ ಪಟ್ಟಿಯನ್ನು ಈ ಮುಂದಿನಂತೆ ಪ್ರಕಟಿಸಬೇಕೆಂದು ನಗರ ಪುರಸಭೆಗೆ ಈ ಮೂಲಕ ನಿರ್ದೇಶಿಸಲಾಗಿದೆ.

1. ಪುರಸಭೆಯ ಕಛೇರಿಯ ಸೂಚನಾ ಫಲಕದ ಮೇಲೆ ಅಂಟಿಸುವುದು;
2. ಎಲ್ಲ ಪುರಸಭಾ ವಾಚನಾಲಯಗಳಲ್ಲಿ ಅಥವಾ ಪುರಸಭಾ ಪ್ರದೇಶದೊಳಗೆ ಎದ್ದು ಕಾಣುವಂತಹ ಜಾಗವೆಂದು ಪುರಸಭೆಯು ಪರಿಗಣಿಸುವಂತಹ ಸ್ಥಳಗಳಲ್ಲಿ ಪ್ರದರ್ಶಿಸುವುದು;
3. ತಾಲ್ಲೂಕು ಕಛೇರಿ ಅಥವಾ ತಹಶೀಲ್ದಾರ್ ಕಚೇರಿಯ ಸೂಚನಾ ಫಲಕದ ಮೇಲೆ ಅಂಟಿಸುವುದು;
4. ಪುರಸಭೆಯು ಯಾರ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೋ ಆ ನಗರ ಯೋಜನೆಯ ಸಹಾಯಕ ನಿರ್ದೇಶಕರ ಕಚೇರಿಯ ಸೂಚನಾ ಫಲಕದ ಮೇಲೆ ಕಚೇರಿ ವೇಳೆಯಲ್ಲಿ ತೊಂಭತ್ತು ಕೆಲಸದ ದಿನಗಳವರೆಗೆ ಅಂಟಿಸುವುದು.

ಕರ್ನಾಟಕ ಸರ್ಕಾರವು, ಹಾಗೆ ನಿರ್ದಿಷ್ಟಪಡಿಸಲಾದ ತೊಂಭತ್ತು ದಿನಗಳ ಅವಧಿಯ ನಂತರ, ಸದರಿ ಅಧ್ಯಾದೇಶದ 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಅನುಸಾರ, ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ, ಮೇಲೆ ಹೇಳಿದ ಪಟ್ಟಿಯನ್ನು ಅನುಮೋದಿಸತಕ್ಕುದೆಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಸಂತುರಾಮರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ.

ಇವರಿಗೆ,
ವಿಭಾಗಾಧಿಕಾರಿ.................. ವಿಭಾಗ,
ಜಿಲ್ಲಾಧಿಕಾರಿ .................... ಜಿಲ್ಲೆ,
ನಗರ ಯೋಜನೆ ನಿರ್ದೇಶಕರು, ಬೆಂಗಳೂರು.